ಅ)	1)	ಸರ್ಕಾರಿ ಕಾಲೇಜುಗಳು	139
	2)	ಅನುದಾನಿತ ಕಾಲೇಜುಗಳು	289
	3)	ಅನುದಾನ ರಹಿತ ಕಾಲೇಜುಗಳು	284
		ಒಟ್ಟು	712
ಆ)	1)	ಸರ್ಕಾರಿ ಕಾಲೇಜುಗಳು	89387
	2)	ಅನುದಾನಿತ ಕಾಲೇಜುಗಳು	35137
	3)	ಅನುದಾನ ರಹಿತ ಕಾಲೇಜುಗಳು	35065

ಇ) ರೂ. 218.71 ಕೋಟಿ (ಯೋಜನೇತರ)
ರೂ. 12.82 ಕೋಟಿ (ಯೋಜನೆ)

ಹುಬ್ಬಳ್ಳಿ ಕೆ.ಎಂ.ಸಿ. "ಕಿಮ್ಸ್" ಸ್ವಾಯತ್ತ ಸಂಸ್ಥೆಯಾದ ನಂತರ ಸರ್ಕಾರದ ನಿಯಂತ್ರಣ.

371 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯ ಕೆ.ಎಂ.ಸಿ. "ಕಿಮ್ಸ್" ಅಂತಾ ಸ್ವಾಯತ್ತ ಸಂಸ್ಥೆಯಾಗಿ ಎಂದಿನಿಂದ ಅಸ್ತಿತ್ವಕ್ಕೆ ಬಂದಿದೆ, ಅದರ ವ್ಯಾಪ್ತಿಗಳೇನು, ಅದರ ಮೇಲೆ ಸರ್ಕಾರದಿಂದ ಯಾವ ಪ್ರಕಾರದ ನಿಯಂತ್ರಣವಿರುತ್ತದೆ, ಅಲ್ಲಿರುವ ನೌಕರರ ಸ್ಥಾನಮಾನಗಳೇನು? (ವಿವರಗಳನ್ನು ಒದಗಿಸುವುದು)

ಶ್ರೀ ಎ. ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯವನ್ನು ದಿನಾಂಕ 11-11-94ರಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಪರಿವರ್ತಿಸಿ ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ ಎಂದು ಹೆಸರಿಸಲಾಯ್ತು. ಸದರಿ ಸಂಸ್ಥೆಯನ್ನು ದಿನಾಂಕ 6-2-96ರಂದು ನೋಂದಾಯಿಸಲಾಗಿದೆ. ಈಗಾಗಲೇ ಈ ಸಂಸ್ಥಗೆ ನಿರ್ದೇಶಕರನ್ನು ನೇಮಕ ಮಾಡಲಾಗಿದೆ.

ಈ ಸಂಸ್ಥೆಯು ಸರ್ಕಾರದ ನೇರ ನಿಯಂತ್ರಣದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸಂಸ್ಥೆಯ ನೀತಿ ನಿರೂಪಣೆಯು ಸರ್ಕಾರದ ಪರಿಶೀಲನೆಯಲ್ಲಿದ್ದು, ನೀತಿ ನಿಯಮಗಳನ್ನು ರೂಪಿಸಿದ ನಂತರ ಸಂಸ್ಥೆಯ ನೌಕರರ ಸ್ಥಾನಮಾನಗಳು ನಿರ್ಧಾರವಾಗುವುವು.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಏಡ್ಸ್ ರೋಗಿಗಳ ಸಂಖ್ಯೆ

372- ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ವಾರ್ತಾ ಮತ್ತು ಪ್ರಸಾರ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಇಲ್ಲಿಯವರೆವಿಗೆ ಪತ್ತೆಯಾಗಿರುವ ಏಡ್ಸ ರೋಗಿಗಳ ಸಂಖ್ಯೆ ಎಷ್ಟು?

ಅ) ಈ ರೋಗ ಹರಡುವುದನ್ನು ತಡೆಯಲು ಸರ್ಕಾರದವರು ಕೈಗೊಂಡಿರುವ ಕ್ರಮ ಗಳೇನು ?

ಶ್ರೀ ಎಂ. ಸಿ ನಾಣಯ್ಯ (ವಾರ್ತಾ ಮತ್ತು ಪ್ರಚಾರ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಈವರೆವಿಗೂ ಏಡ್ಸ್ ರೋಗಿಗಳು ಪತ್ತೆಯಾಗಿರುವುದಿಲ್ಲ.

ಆ) ಏಡ್ಸ್ ರೋಗ ಹರಡುವುದನ್ನು ತಡೆಯಲು ರಾಜ್ಯದಲ್ಲಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

ರಾಷ್ಟ್ರೀಯ ಏಡ್ಸ್ ನಿಯಂತ್ರಣ ಸಂಸ್ಥೆ, ಭಾರತ ಸರ್ಕಾರ ಇವರ ಮಾರ್ಗಸೂಚಿಯಲ್ಲಿ ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ರೋಗದ ಸೋಂಕನ್ನು ಪತ್ತೆ ಹಚ್ಚಲು ಮೂರು ಏಡ್ಸ್ ಸಮೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

2. ರಕ್ತ ಸುರಕ್ಷತೆಗಾಗಿ 10 ವಲಯ ರಕ್ತ ತಪಾಸಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ.

   ಈ ಕೇಂದ್ರಗಳಿಗೆ ಹಾಲಿ ಇರುವ ಎಲ್ಲಾ ರಕ್ತನಿಧಿ ಕೇಂದ್ರಗಳನ್ನು (ಸರ್ಕಾರಿ ಮತ್ತು ಖಾಸಗಿ) ಹೆಚ್ ಐ ವಿ. ಸೋಂಕು ಪರೀಕ್ಷೆಗಾಗಿ ಜೋಡಣೆ ಮಾಡಲಾಗಿದೆ.

3. ರಾಜ್ಯದಲ್ಲಿ ಒಂದು ರಕ್ತಕಣ ವಿಭಜನಾ ಕೇಂದ್ರವನ್ನು ಸ್ಥಾಪಿಸಲಾಗಿದೆ.

4. ಸರ್ಕಾರಿ ಆಸ್ಪತ್ರೆಗಳಲ್ಲಿರುವ 35 ರಕ್ತನಿಧಿ ಕೇಂದ್ರಗಳನ್ನು ರಕ್ತ ಸುರಕ್ಷತೆಗಾಗಿ ಸಮರ್ಪಕವಾಗಿ ಕೆಲಸ ಮಾಡಲು ಹಂತ ಹಂತವಾಗಿ ಆಧುನೀಕರಣ ಗೊಳಿಸಲಾಗುತ್ತಿದೆ.

5. ರಾಜ್ಯದಲ್ಲಿರುವ 24 ಲೈಂಗಿಕ ಚಟುವಟಿಕೆಗಳ ಔಷಧಾಲಯಗಳನ್ನು ಬಲಪಡಿಸಲಾಗುತ್ತಿದೆ.

6. ಕೆಲವು ಆತಂಕಕಾರಿ ಗುಂಪುಗಳಲ್ಲಿ ಹೆಚ್.ಐ.ವಿ. ಸೋಂಕಿನ ಪ್ರಮಾಣವನ್ನು ತಿಳಿಯಲು 8 ಸೆಂಟಿನಲ್ ಸಮೀಕ್ಷಾ ಕೇಂದ್ರಗಳನ್ನು ಗುರುತಿಸಲಾಗಿದ್ದು ಸಮೀಕ್ಷೆ ನಡಸಲಾಗುತ್ತಿದೆ.

7. ರಾಜ್ಯದಲ್ಲಿನ ವೈದ್ಯರು ಮತ್ತ ಅರೆ ವೈದ್ಯ ಸಿಬ್ಬಂದಿಗಳಿಗೆ ಏಡ್ಸ್ ಚಿಕಿತ್ಸೆ ಬಗ್ಗೆ ತಿಳುವಳಿಕೆ ಮೂಡಿಸಲು ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹಾಗೂ ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಏಡ್ಸ ರೋಗವನ್ನು ಗುರುತಿಸಿ ಚಿಕಿತ್ಸೆ ನೀಡಲು ಹಿರಿಯ ವೈದ್ಯರುಗಳಿಗೆ ತರಬೇತಿ ನೀಡಲಾಗಿದೆ. ಹಾಗೂ ಏಡ್ಸ ರೋಗಿಗಳು ಚಿಕಿತ್ಸೆಗಾಗಿ ಬಂದಲ್ಲಿ ಆದ್ಯತೆ ಮೇರೆಗ ಚಿಕಿತ್ಸೆ ನೀಡಲು ಸೂಚಿಲಾಗಿದೆ. ಹಾಗೂ ಸೂಜಿ,

ಸಿರಿಂಜ್ ಮತ್ತು ಇತರೆ ಸಲಕರಣೆಗಳನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ಉಪಯೋಗಿಸುವಂತೆ ಸೂಚಿಸಲಾಗಿದೆ.

8. ಜನಸಾಮಾನ್ಯರಲ್ಲಿ ಏಡ್ಸ್ ಬಗ್ಗೆ ಅರಿವು ಮೂಡಿಸಲು ಸಮೂಹ ಮಾಧ್ಯಮ ಶಿಕ್ಷಣ ಸಂಪರ್ಕವು ಚಟುವಟಿಕೆಗಳನ್ನು ಚುರುಕುಗೊಳಿಸಲಾಗುತ್ತಿದೆ. ಈ ದಿಶೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಸಹಕಾರವನ್ನು ಪಡೆಯಲಾಗುತ್ತಿದೆ.

ಸಚಿವಾಲಯದ ಡಿಸ್ಪೆನ್ಸರಿಯಲ್ಲಿ ಚಿಕಿತ್ಸೆ ಪಡೆಯುವ ಬಗ್ಗೆ

375 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸಚಿವಾಲಯ ಡಿಸ್ಪೆನ್ಸರಿ ವೈದ್ಯರುಗಳು ಯಾವ ಯಾವ ಔಷಧಿಗಳನ್ನು ಪ್ರಿಸ್ಕೈಬ್ ಮಾಡಬಹುದು. (ಪಟ್ಟಿ ನೀಡುವುದು)

2) ಈ ವೈದ್ಯರಿಂದ ಚಿಕಿತ್ಸೆ ಪಡೆದ ಬಿಲ್ಲುಗಳನ್ನು ಸರ್ಕಾರಿ ನೌಕರರು ಮರುಪಾವತಿ ಕೋರಿ ಅರ್ಜಿ ಸಲ್ಲಿಸಬಹುದೇ?

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಚಿಕಿತ್ಸೆಗೆ ಅಗತ್ಯವಾದ ಎಲ್ಲಾ ಔಷಧಿಗಳನ್ನು ಪ್ರಿಸ್ಕೈಬ್ ಮಾಡಬಹುದು.

ಆ) ಸಲ್ಲಿಸಬಹುದು.

ಪದವಿ ಮಟ್ಟದಲ್ಲಿ ವೃತ್ತಿ ಶಿಕ್ಷಣ ವಿಷಯಗಳನ್ನು ಅಳವಡಿಸುವ ಬಗ್ಗೆ

378 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪದವಿ ಮಟ್ಟದಲ್ಲಿ ವೃತ್ತಿ ಶಿಕ್ಷಣ ವಿಷಯಗಳನ್ನು ಅಳವಡಿಸಲು ಯೋಗ್ಯವಾದ ವಿಷಯಗಳಾವುವು? (ಪಟ್ಟಿ ನೀಡುವುದು)

ಆ) ಈ ವಿಷಯಗಳನ್ನು ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಅಳವಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) 1ನೇ ಅನುಬಂಧದಲ್ಲಿ ನಮೂದಿಸಲಾಗಿದೆ.

ಆ) ಯು.ಜಿ.ಸಿ. ಆಯ್ದು ಕೆಲವು ಕಾಲೇಜುಗಳಲ್ಲಿ ಯು.ಜಿ.ಸಿ. ನೆರವಿನೊಂದಿಗೆ ಪ್ರಾರಂಭಿಸಲಾಗಿದೆ.